ಕಥೆ

# ಜೋಡು



**ಶ್ರೀಮತಿ ದೇವಿ**
ಕಲೆ: ವೆಂಕಟ್ರಮಣ ಭಟ್

'ಥತ್, ಇವತ್ಯಾಕೋ ಇದು ಸರಿಯಾಗಿ ತಾಗೋ ಥರ ಕಾಣಿಸುತ್ತಿಲ್ಲ' ಎಂದವನೇ ಏಕನಾಥ ತಂಬೂರ ಕೆಳಗಿಟ್ಟು ಮೇಲಕ್ಕೆದ್ದ. ಕಳೆದ ಅರ್ಧ ಗಂಟೆಯಿಂದ ಎಷ್ಟು ಪ್ರಯತ್ನಿಸಿದರೂ ಇವತ್ತು ಸ್ವರಗಳು ತಾನು ಬಯಸಿದಂತೆ ತಾಗುತ್ತಿಲ್ಲ ಎಂದೆನಿಸಿ, ತಂಬೂರವನ್ನು ಗೋಡೆಗಾನಿಸಿ ಇಟ್ಟು ಕೋಣೆಯಿಂದ ಹೊರನಡೆದಿದ್ದ. ದಿನಬೆಳಗಾದೊಡನೆ ಎದ್ದು ಮುಖ ತೊಳೆದು ತಂಬೂರ ಹಚ್ಚಿ, ಅಭ್ಯಾಸಕ್ಕೆ ಕೂಡುವ ಏಕನಾಥನನ್ನು ಆ ದಿನ ಇನ್ನೂ ಸವಿನಿದ್ದೆಯಲ್ಲಿದ್ದಾಗಲೇ ಎಬ್ಬಿಸಿದ್ದ ಫೋನ್ ಕರೆ ವಿಚಲಿತಗೊಳಿಸಿಬಿಟ್ಟಿತ್ತು.

ಹಾಗೆ ನೋಡಿದರೆ ಎರಡು ದಿನಗಳ ಹಿಂದಷ್ಟೇ ಮಹಾರಾಷ್ಟ್ರದ ನಾಗಪುರದ ಹಳ್ಳಿಯೊಂದರಲ್ಲಿ ನೆರೆದ ನೂರಾರು ಜನರ ಮುಂದೆ ಹಾಡಿ ದೊಡ್ಡ ಪ್ರಮಾಣದ ಮೆಚ್ಚುಗೆಯನ್ನು ಗಳಿಸಿಕೊಂಡು ಬಂದಿದ್ದ ಏಕನಾಥನಿಗೆ, ನಿಧಾನವಾಗಿ ತನಗೆ ತಾರಾವರ್ಚಸ್ಸು ಬರುತ್ತಿದ್ದುದರ ಅನುಭವವಾಗತೊಡಗಿತ್ತು. ತುಂಬಾ ಕಷ್ಟದ ದಾರಿಯಲ್ಲಿ ಏಗುತ್ತಾ ಸಾಗಿ ಬಂದ ಏಕನಾಥ, ತನಗೆ ಒದಗಿ ಬಂದ ಈ ಸುಖದ ನೌಕೆಯಲ್ಲಿ ವಿಹರಿಸಲು ಆರಂಭಿಸಿದೊಡನೆಯೇ ಯಾರೋ ಹಿಂದಿನಿಂದ ಜಗ್ಗಿದಂತಾಗಿ ಅಲುಗಿಬಿಟ್ಟಿದ್ದ.

ಹೊರಗಡೆ ಇದ್ದ ತನ್ನ ಹಳೆಯ ಚಪ್ಪಲಿಗಳನ್ನು ಮೆಟ್ಟಿಕೊಂಡು ಪಕ್ಕದ ಟೀಸ್ಟಾಲಿನತ್ತ ನಡೆದ. ಎಂದಿನಂತೆ ಎದುರಾದ ಪರಿಚಿತರ 'ನಮಸ್ಕಾರ' ಯಾವತ್ತಿನಂತೆ ಇವತ್ತು ಹೆಮ್ಮೆ ಪಡುವ ವಿಷಯವಾಗಲಿಲ್ಲ. ಯಾವುದೋ ಲೋಕದೊಳಗೆ ಕಳೆದುಹೋಗಿದ್ದ ಅವನ ಮನಸ್ಸು 30 ವರ್ಷಗಳ ಹಿಂದಕ್ಕೆ ನಡೆದಿತ್ತು. ಅವನ ನೆನಪಿನ ತುಂಬಾ ಗುರುಗಳಾದ ತಾರಾನಾಥ ದೇಸಾಯಿ ಅವರ ಚಹರೆ ಮತ್ತು ಅವರ ಜೋಡಿ ತಂಬೂರಗಳಿಂದ ಹೊರಬರುತ್ತಿದ್ದ ಅಖಂಡ ಝೇಂಕಾರದ ನಾದ ತುಂಬಿಬಿಟ್ಟಿತು.

ಹಳ್ಳಿಯ ಹೊಲಗಳಲ್ಲಿ ಆಟವಾಡುತ್ತಾ, ಗೆಳೆಯರೊಂದಿಗೆ ಶಾಲೆಗೆ ಹೋಗುತ್ತಾ ಇದ್ದ ಒಂದು ಸಾಮಾನ್ಯ ದಿನದಲ್ಲೇ ಅವನು ಎಲ್ಲಿಂದಲೋ ಬಂದು ವಿಠ್ಠಲನ ಮಂದಿರದಲ್ಲಿ ಇಳಿದುಕೊಂಡ ಗವಾಯಿಗಳ ಬಗ್ಗೆ ಕೇಳಿದ್ದು. ಅವರ ಬಗ್ಗೆ ಜನ ಮಾತಾಡುವುದು ಕೇಳಿ ಕುತೂಹಲದಿಂದ ತಾನೂ ಹೋಗಿ ನೋಡಿದ ನೆನಪು ಇನ್ನೂ ಒಂದಿಷ್ಟೂ ಮಾಸಿಲ್ಲ. ತನ್ನ ಗೆಳೆಯರೆಲ್ಲಾ ಒಂದೆರಡು ದಿನಗಳಲ್ಲೇ ಅಲ್ಲಿಂದ ದೂರವಾದರೂ ತಾನು ಮಾತ್ರ ಗವಾಯಿಗಳ ಕೈಯ ತಂಬೂರದ ನಾದದ ಸೆಳೆತಕ್ಕೊಳಗಾಗಿದ್ದೆ. ಶಾಲೆಗೆಂದು ಬೇಗ ಹೊರಟು ಗವಾಯಿಗಳಿಗೆ ನಮಸ್ಕರಿಸಿ, ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಟ್ಟು ಮತ್ತೆ ಶಾಲೆ ಮುಗಿದೊಡನೆ ಅಲ್ಲೇ ಬಂದುಬಿಡುತ್ತಿದ್ದೆ.